"ಈ ಪಟ್ಟಣ ಅನ್ನೋದು ಜನರ ಪಾಲಿಗೆ ಇಂದು ಕೇವಲ ಒಂದು ಹುಚ್ಚಾಗಿ ಉಳಿದಿಲ್ಲ ಸೂರಿ. ಅದೀಗ ಎಲ್ಲರ ಅನಿವಾರ್ಯವಾಗಿಬಿಟ್ಟಿದೆ. ಊರಲ್ಲಿ ಪೂರ್ತಿ ಹೊಟ್ಟೆ ತುಂಬಿಸುವ ಹತ್ತು ಸಾವಿರಕ್ಕಿಂತಲೂ ಪಟ್ಟಣದಲ್ಲಿ ಅರ್ಧ ಹಸಿವನ್ನೂ ನೀಗಿಸದ ಮೂವತ್ತು ಸಾವಿರವನ್ನೇ ಎಲ್ಲರೂ ಬಯಸುತ್ತಾರೆ. ಪಟ್ಟಣದ ಸರಕೇ ಬೇಕು. ಪಟ್ಟಣದ ಸೇವೆಯೇ ಆಗಬೇಕು. ಪಟ್ಟಣದ ಬೀದಿಗಳಲ್ಲಿ ಅಲೆದಾಡುವುದೇ ಚಂದ... ಇವೆಲ್ಲದರ ನಡುವೆ ಅತ್ತ ಪಟ್ಟಣಿಗರೂ ಆಗದೆ, ಇತ್ತ ಹಳ್ಳಿಯವರೂ ಆಗದೆ ನಡು ಹೊಸಿಲಲ್ಲೇ ಉಳಿದು ಸೊರಗುವ ನನ್ನ–ನಿನ್ನಂಥವರನ್ನು ಕೇಳುವವರಾದರೂ ಯಾರು?"

ತನ್ನಷ್ಟಕ್ಕೇ ಎಂಬಂತೆ ನುಡಿದ ಶಿಶಿರನ ಮಾತಿಗೆ ಏನನ್ನೂ ಹೇಳದಾದ ಸೂರಿ ಏನೋ ಹೊಳೆದಂತೆ ಥಟ್ಟನೆ ಮೇಲೆದ್ದ. "ಲಾಗದಮನೆ ಶಂಕ್ರಣ್ಣನತ್ರ ಐದು ಸಾವಿರ ಇದ್ರೆ ಕೊಡಿ ಅಂದಿದ್ದೆ. ಈಗ ಬಾ ಅಂದಿದ್ರು. ಹೋಗಿ ತರೋಣ ಬರ್ತೀಯಾ?" ಎನ್ನುತ್ತಾ ಹೊರಗೆ ನಡೆದ. ಹಳ್ಳಿ ಬದುಕಿನ ಮತ್ತೊಂದು ಯಾಚನೆ, ಮತ್ತೊಂದು ಬೇಡುವಿಕೆಯನ್ನು ನೋಡಲಿಚ್ಛಿಸದ ಶಿಶಿರ "ಇಲ್ಲ ಹೋಗಿ ಬಾ" ಎನ್ನುತ್ತಾ ಮೇಲೆದ್ದ. ದ್ವಾರಬಾಗಿಲಿನಲ್ಲಿ 'ನಮಸ್ಕಾರ. ಪುನಃ ಬನ್ನಿ' ಎಂಬ ಬರಹದ ಕೆಳಗೆ ಕೈಗಳೆರೆಡು ಮುಗಿದುಕೊಂಡಿದ್ದವು. ಆ ನಮಸ್ಕಾರ, ಆ ಆಶಯ ಇಡೀ ಹಳ್ಳಿ ಬದುಕಿನ ಸಕಲ ಜೀವನದಿಂದಲೇ ಎದ್ದು ಬಂದಂತಿತ್ತು.

ಶಿಶಿರನನ್ನು ಬಸ್ಸು ನಿಲ್ದಾಣದ ತನಕ ಬೈಕಿನಲ್ಲಿ ಬಿಟ್ಟು ಹೊರಡುವ ಮುನ್ನ ಸುರೇಶ ಕೊನೆಯ ಆಘಾತದ ಮಾತನ್ನು ನುಡಿದ:

"ಮುಂದಿನ ತಿಂಗಳಲ್ಲಿ ಅಂಗಡಿ ಖಾಲಿ ಮಾಡಿ ಬೆಂಗಳೂರಿಗೆ ಬರ್ಬೇಕಂತಿದೀನಿ. ಯಾವುದಾದ್ರೂ ಕೆಲಸ ಇದ್ರೆ ಹೇಳು..."

ಶಿಶಿರ ಥಟ್ಟನೆ ತಿರುಗಿದ. ತಾನು ಯಾರ ಬಳಿ 'ನನಗೆ ಆಸರೆಯಾಗು' ಎಂದು ಕೇಳಲು ಬಂದಿದ್ದನೋ ಆ ಆಸರೆಯೇ ಅವನೆದುರು ನಿಂತು 'ನನ್ನನ್ನು ಉಳಿಸು' ಎಂದು ಕೇಳುತ್ತಿರುವುದನ್ನು ನೋಡಿದವನ ಮನದಿಂದ ನಗೆಯೊಂದು ಭಾರವಾಗಿ ಹೊರಬಂತು.

"ಬಾ ಸೂರಿ... ಇಷ್ಟಪಡದವರನ್ನೇ ಬಿಡದ ಪಟ್ಟಣ... ಇನ್ನು ಕಷ್ಟ ಪಡುವವರಿಗೆ ಇಲ್ಲ ಎನ್ನುತ್ತದೆಯೇ? ಧಾರಾಳವಾಗಿ ಬಾ..."

ಸೂರಿಗೆ ಕೈಬೀಸಿದ ಶಿಶಿರ ಬಸ್ಸು ಹತ್ತಿ ಕುಳಿತ. ಮುಚ್ಚಿದ ಕಿಟಕಿ ಗಾಜಿನಾಚೆಗೆ ಸುರಿಯುತ್ತಿದ್ದ ಮಳೆ ತನ್ನದಲ್ಲದ ಯಾವುದೋ ಕನಸಿನ ಲೋಕದಲ್ಲಿ ಸುರಿಯುತ್ತಿರುವಂತೆ ಭಾಸವಾಯಿತು. ತಾನು ಕುಳಿತಿರುವ ಬಸ್ಸೂ ಸೇರಿದಂತೆ ರಸ್ತೆಯ ಮೇಲಿರುವ ಸಕಲ ವಾಹನಗಳೂ ಆ ಮಳೆಯಿಂದ ದೂರ ಸಾಗುತ್ತಾ ದೂರದ ಬೆಂಗಳೂರಿನತ್ತ ಓಡುತ್ತಿವೆಯೇನೋ ಅನ್ನಿಸಿ ಶಿಶಿರ ಸೀಟಿಗೊರಗಿ ಗಟ್ಟಿಯಾಗಿ ಕಣ್ಮುಚ್ಚಿಕೊಂಡ.

### ವಿನಾಯಕ ಅರಳಸುರಳಿ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಅರಳಸುರಳಿ ಗ್ರಾಮದವರು. ಕುವೆಂಪು ವಿಶ್ವವಿದ್ಯಾಲಯದ ಬಿ.ಕಾಂ. ಪದವೀಧರ. ಬೆಂಗಳೂರಿನ ಖಾಸಗಿ ಕಂಪನಿಯೊಂದರ ಉದ್ಯೋಗಿ. ಕತೆ, ಕವನ ಹಾಗೂ ಲಲಿತ ಪ್ರಬಂಧಗಳು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.